ಈ ಮೈಕ್‌ಮ್ಯಾನ್‌ನ (ಡಂಗೂರಗಾರ) ಕೆಲಸವೇ ನನ್ನೊಳಗಿನ ಮಾತುಗಾರನಿಗೆ ವೇದಿಕೆಯಾಯಿತು. ಮುಂದೆ ಕ್ರೀಡಾಕೂಟಗಳಲ್ಲಿ ವೀಕ್ಷಕ ವಿವರಣೆ ನೀಡುವ, ಕಾರ್ಯಕ್ರಮಗಳ ನಿರೂಪಣೆ ಮಾಡುವ, ಕಾಲೇಜಿನ ವೇದಿಕೆಯಲ್ಲಿ ನಿಂತು ಭಾಷಣ ಮಾಡುವ, ಪ್ರತಿಭಟನೆ ಮಾಡುವಾಗ ಜೋರಾಗಿ ಘೋಷಣೆ ಕೂಗುವ, ಕೊನೆಗೆ ತರಗತಿಯಲ್ಲಿ ನಿಂತು ಪಾಠ ಮಾಡುವ ಹಂತಕ್ಕೆ ತಂದು ನಿಲ್ಲಿಸಿತು.

ಈಗ ಕಾಲ ಬದಲಾಗಿದೆ. ಡಂಗೂರ ಸಾರುವವರಿಲ್ಲ, ಮೈಕ್ ಪ್ರಚಾರಕರಿಲ್ಲ. ಒಮ್ಮೆ ಯಾವುದಾದರೂ ಆಡಿಯೋ ಎಡಿಟಿಂಗ್ ಮಾಡುವ ಸ್ಟುಡಿಯೋಗೆ ಹೋಗಿ ಧ್ವನಿಯನ್ನು ರೆಕಾರ್ಡ್ ಮಾಡಿಸಿ, ಅದನ್ನೇ ಮತ್ತೆಮತ್ತೆ ಪ್ಲೇ ಮಾಡಿಸಲಾಗುತ್ತದೆ. ತರಕಾರಿ ಮಾರುವ ಸಣ್ಣ ವ್ಯಾಪಾರಸ್ಥನೂ ಕೂಗಿಕೂಗಿ ವ್ಯಾಪಾರ ಮಾಡೋದನ್ನು ಬಿಟ್ಟು ರೆಕಾರ್ಡ್ ಮಾಡಿದ ತನ್ನ ಧ್ವನಿಯನ್ನು ಸ್ಪೀಕರ್‌ನಲ್ಲಿ ಹಾಕಿ ವ್ಯಾಪಾರ ಮಾಡುವ ಕಾಲ ಈಗ ಬಂದಿದೆ.

ಇನ್ನೊಂದು ವಿಚಾರವನ್ನು ಇಲ್ಲಿ ಹೇಳಲೇಬೇಕು. ಶಾಮಿಯಾನ ಕೆಲಸ ಮಾಡುವ ಸಂದರ್ಭದಲ್ಲಿ ಮಂದಿರ, ಮಸೀದಿ, ಚರ್ಚ್‌ನಲ್ಲಿ ಕಾರ್ಯಕ್ರಮಗಳಿಗೆ ಧ್ವನಿವರ್ಧಕಗಳನ್ನು ಅಳವಡಿಸುವ ಸಂದರ್ಭ ಅಪರೇಟರ್‌ಗೆ ಅಲ್ಲಿ ಮುಕ್ತವಾದ ಪ್ರವೇಶವನ್ನು ನೀಡಲಾಗುತ್ತಿತ್ತು. ಮಸೀದಿಯ ಮಿನಾರದ ಮೇಲೆ ಹತ್ತಿ, ಮಂದಿರದ ಗೋಪುರದ ಪಕ್ಕಕ್ಕೆ ಹಾರನ್ ರೀತಿಯ ಲೌಡ್‌ಸ್ಪೀಕರ್‌ಗಳನ್ನು ಅಳವಡಿಸಲು, ಅನೌನ್ಸ್‌ಮೆಂಟ್ ಮಾಡಲು ಅವಕಾಶವಿತ್ತು. ಆದರೆ ಇಂದು ಪರಿಸ್ಥಿತಿ ಹಿಂದಿನಂತಿಲ್ಲ. ವೃತ್ತಿಯ ಲಕ್ಷಣ ಬದಲಾಗಿದೆ. ಜಾತಿ, ಧರ್ಮ ನೋಡಿ ವೃತ್ತಿ, ವ್ಯಾಪಾರವನ್ನು ಮಾಡಲಾಗುತ್ತಿದೆ. ಕೆಲವು ಕಡೆ ಕೆಲವರಿಗೆ ಬಹಿಷ್ಕಾರವೂ ಇದೆ. ಎಲ್ಲಾ ಕಡೆ ಎಲ್ಲರಿಗೂ ಪ್ರವೇಶವಿಲ್ಲ, ನಿರ್ಬಂಧ ವಿಧಿಸಲಾಗಿದೆ. ಇನ್ನೊಂದು ವಿಚಾರ ಸುಪ್ರೀಂಕೋರ್ಟ್ ಇತ್ತೀಚೆಗೆ ನೀಡಿದ್ದ ತೀರ್ಪಿನ ಅನ್ವಯ ರಾತ್ರಿ ಹತ್ತರಿಂದ ಮುಂಜಾನೆ ಆರು ಗಂಟೆಯವರೆಗೆ ಧ್ವನಿವರ್ಧಕ ಬಳಕೆಯನ್ನು ನಿಷೇಧಿಸಲಾಗಿದೆ. ಈ ವಿಚಾರವನ್ನು ಧಾರ್ಮಿಕ ಪರಿಪ್ರೇಕ್ಷೆಯಲ್ಲಿಟ್ಟು ಚರ್ಚಿಸುವ ಸ್ಥಿತಿ ಈಗ ಬಂದಿದೆ. ಅಜ್ಞಾನ್ ಕೇಂದ್ರಿತ ಚರ್ಚೆ ಕೋಮುವಾದ, ಮೂಲಭೂತವಾದದ ಆಯಾಮವನ್ನು ಪಡೆದುಕೊಂಡಿದ್ದನ್ನು ಗಮನಿಸಲು ಸಾಧ್ಯವಿದೆ.

ಶಬ್ದ, ಧ್ವನಿ, ಸಂಗೀತ ಇತ್ಯಾದಿಗಳ ಬಗ್ಗೆ ಹೇಳುವಾಗ ಮಸೀದಿ ಕಾರ್ಯಕ್ರಮದಲ್ಲಿ ಪ್ರಭಾಷಣಕ್ಕಾಗಿ ಬರುವ ಕೇರಳ ಭಾಗದ ಉಸ್ತಾದರು, ಮಲಯಾಳಂ ಕಥಾಪ್ರಸಂಗ ಹೇಳುವ ಪ್ರಸಂಗಕಾರರಿಗೆ ಧ್ವನಿವರ್ಧಕ ಹೆಚ್ಚುಬೇಕು. ಶಬ್ದ ಸ್ಫೋಟವಾಗುವಷ್ಟು ಸೌಂಡ್ ಬಾಕ್ಸ್‌ಗಳನ್ನು ಅಳವಡಿಸಲಾಗುತ್ತದೆ. ಐದು ಸಾವಿರ, ಹತ್ತು ಸಾವಿರ ಕಿಲೋವ್ಯಾಟ್ ಲೆಕ್ಕದಲ್ಲಿ ಶಬ್ದ ಪ್ರತಿಧ್ವನಿಸುವ ಯಕೋ ಸಿಸ್ಟಮ್ ಇಲ್ಲದಿದ್ದರೆ ಅವರು ಖಂಡಿತವಾಗಿಯೂ ಕಾರ್ಯಕ್ರಮ ನಡೆಸಿಕೊಡುವುದಿಲ್ಲ. ಕಾರ್ಯಕ್ರಮ ಬುಕ್ ಮಾಡಲು ತೆರಳುವ ಮಸೀದಿ ಕಮಿಟಿಯವರ ಮುಂದೆ ಧ್ವನಿವರ್ಧಕ ಹೆಚ್ಚಿರಬೇಕು ಎಂಬ ಬೇಡಿಕೆಯನ್ನು ಅವರು ಖಂಡಿತವಾಗಿಯೂ ಮುಂದಿಡುತ್ತಾರೆ. ಕೆಲವು ಉಸ್ತಾದರು ತಮ್ಮದೇ ಆದ ಸೌಂಡ್ ಸಿಸ್ಟಮ್‌ಗಳನ್ನು, ಕಾರ್ಯಕ್ರಮವನ್ನು ಲೈವ್ ಮಾಡಲು ಲೈವ್ ಸ್ಟ್ರೀಮಿಂಗ್‌ಗಳನ್ನು ಹೊಂದಿದ್ದಾರೆ. ಭಾಷಣದ ಜೊತೆಗೆ ಸೌಂಡ್ ಸಿಸ್ಟಮ್‌ಗೂ ಇತರ ವ್ಯವಸ್ಥೆಗೂ ಅವರು ಮಸೀದಿ ಕಮಿಟಿಯಿಂದ ಹಣ ಪಡೆದುಕೊಳ್ಳುತ್ತಾರೆ.

ಅದೇ ರೀತಿಯಲ್ಲಿ ಕೊಡಗಿನ ದಸರಾ, ಇತರ ಪ್ರದೇಶಗಳ ಗಣೇಶ ವಿಸರ್ಜನೆಯ ಸಂದರ್ಭದಲ್ಲಿಯೂ ಬೃಹದಾಕಾರದ ಸೌಂಡ್‌ಬಾಕ್ಸ್ ಜೊತೆಯಲ್ಲಿ ಸಬ್‌ಹೂಪರ್‌ಗಳನ್ನು ಲಾರಿಯಲ್ಲಿ, ಟ್ರ್ಯಾಕ್ಟರ್‌ಗಳಲ್ಲಿ ಆಕಾಶದೆತ್ತರಕ್ಕೆ ಪೇರಿಸಿಟ್ಟು ಡಿಜೆ ಸ್ಟಿಸ್ಟಮ್ ಅಳವಡಿಸಿ ಹಾಡುಗಳನ್ನು ಹಾಕಿ ಜನರು ಮೈಮರೆತು ಕುಣಿವಂತೆ ಮಾಡಲಾಗುತ್ತದೆ. ಕಾರ್ಯಕ್ರಮದುದ್ದಕ್ಕೂ ಹಾಕುವ ಟಪ್ಪಾಂಗುಚ್ಚಿ ಹಾಡುಗಳ ಬಗ್ಗೆ ಒಂದು ಸಂಶೋಧನಾ ಮಹಾಪ್ರಬಂಧವನ್ನೇ ರಚಿಸಬಹುದು. ರಾತ್ರಿ ಪೂರ್ತಿ ನಡೆಯುವ ದಸರಾ ಕಾರ್ಯಕ್ರಮದಲ್ಲಿ ಧ್ವನಿವರ್ಧಕ ಪೇರಿಸಿಟ್ಟ ವಾಹನದ ಮುಂದೆ ಹಾದು ಹೋಗುವಾಗ ಎದೆ ನಡುಗಿ ಬಿಡುವುದರಲ್ಲಿ ಸಂಶಯವಿಲ್ಲ. ಗುಂಡಿಗೆ ಗಟ್ಟಿ ಇರುವವರು ಮಾತ್ರ ಇಂತಹ ಜಾಗಗಳಿಗೆ ಭೇಟಿಕೊಡುವುದು ಉತ್ತಮ. ಕೆಲವರಂತೂ ಪರಮಾತ್ಮನನ್ನು ಒಳಗೆ ಇಳಿಸಿ ಆ ಸೌಂಡ್ ಬಾಕ್ಸ್‌ಗಳಿಗೆ ತಾಕಿನಿಂತು ಹಾಡಿನ ಬೀಟ್ಸ್‌ಗೆ ಕುಣಿಯುವಾಗ ನನ್ನಲ್ಲಿ ಒಂಥರಾ ಮಜವನ್ನುಂಟು ಮಾಡಿದ್ದು ಸುಳ್ಳಲ್ಲ. ಅವರ